ಶ್ರೀ ಪಿ. ಜಿ. ಆರ್. ಸಿಂಧ್ಯ.—ಆದಷ್ಟು ಶೀಘ್ರದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ.

ಶ್ರೀ ಕೆ. ಹೆಚ್. ರಂಗನಾಥ್.—1977ನೇ ಇಸವಿಯಲ್ಲಿ ಎಲ್ಲೆಲ್ಲಿ ಸಾರ್ವಜನಿಕರು ವಂತಿಗೆ ಕೊಡುವುದಕ್ಕೆ ಮುಂದೆ ಬಂದು ವಂತಿಗೆ ಕೊಡುತ್ತಾರೆ ಅಲ್ಲೆಲ್ಲಾ ಆಸ್ಪತ್ರೆ ಮಂಜೂರು ಮಾಡುತ್ತೇವೆಂದು ಒಂದು ಸರ್ಕಾರಿ ಆದೇಶ ಬಂದಿದೆ. ಅದರ ಪ್ರಕಾರ ಕೆಲವು ಕಡೆಗಳಲ್ಲಿ ಸಾರ್ವಜನಿಕರು ಸರ್ಕಾರ ಕೇಳಿದಷ್ಟು ಹಣ ವನ್ನು ಕೊಟ್ಟಿದ್ದಾರೆ. ಆಸ್ಪತ್ರೆ ಇನ್ನೂ ಮಂಜೂರು ಆಗಿಲ್ಲ. $\frac{1}{3}$ ಹಣವನ್ನು ಎಲ್ಲಾ ಇಲಾಖೆಗಳೂ ಆಧ್ಯ ತೆಯ ಮೇಲೆ ಇಡೇ ಇರುವುದರಿಂದ ಈ ರೀತಿ ತಡವಾಗುವುದಕ್ಕೆ ತೊಂದರೆಯಾಗುತ್ತಿದೆ. ಆ ಸರ್ಕಾರ ಈ ಸರ್ಕಾರ ಎನ್ನುವುದು ಅಲ್ಲ ; ಆಡಳಿತ ಕ್ರಮವನ್ನು ಹೀಗೆ ಮಾಡದೇ ಇರುವುದರಿಂದ ಈ ವರ್ಷ ಖರ್ಚು 10 ಲಕ್ಷ ಆಗುತ್ತಿದ್ದ ಕಡೆ ಮುಂದಿನ ವರ್ಷ 20 ಲಕ್ಷ ಖರ್ಚು ಬರುತ್ತದೆ. ಈ ಕೆಲಸವನ್ನು ಮುಂದುವರಿ ಸುವುದರಿಂದ ಬೆಲೆ ಕೂಡ ಜಾಸ್ತಿಯಾಗುತ್ತದೆ. ಹೀಗೆ ನಾನಾ ಕಾರಣಗಳಿಂದ ಕೆಲಸ ಮುಂದೆ ಹೋದರೆ ಕೆಲಸ ಆಗುವುದಿಲ್ಲ. ಒಂದು ನಿರ್ದಿಷ್ಟ ಕ್ರಮ ಹಾಕಿಕೊಂಡು 2 ವರ್ಷಗಳಲ್ಲೇ ಬಜೆಟ್‌ನಲ್ಲಿ ಹಣವನ್ನು ಒದಗಿಸಿ ಇಂತಿಷ್ಟು ಹಣ ಎಂದು ಇಟ್ಟು, ನಿಖರವಾದ ಒಂದು ಕಾರ್ಯಕ್ರಮವನು ಸರ್ಕಾರ ತೆಗೆದುಕೊಂಡರೆ ತಡವಾಗುವುದು ತಪ್ಪುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಹೇಳಿದಂತೆ ಪಿ.ಎಚ್.ಸಿ.ಯೂನಿಟ್‌ಗಳಿಗೆ ರಾಜ್ಯದ ಅನೇಕ ಭಾಗಗಳಿಂದ ಬೇಡಿಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಪಿ.ಎಚ್.ಸಿ.ಯೂನಿಟ್‌ಗಳು ಇಲ್ಲದೇ ಇರುವ ಕಡೆಗಳಲ್ಲಿ 25 ಸಾವಿರ ಡಿಪಾಸಿಟ್ ಮಾಡಿದ್ದರೂ ಪಿ.ಹೆಚ್.ಸಿ. ಯೂನಿಟ್ಸ್ ಮಂಜೂರು ಆಗದೇ ಇರುವ ಸ್ಥಳಗಳು ಇವೆ. ಇದರ ಬಗ್ಗೆ ನನ್ನ ಇಲಾಖೆಯ ವತಿಯಿಂದ ಆದಷ್ಟು ಶೀಘ್ರವಾಗಿ ಪಿ. ಹೆಚ್.ಸಿ. ಸೆಂಟರ್‌ಗಳನ್ನು ಮಂಜೂರು ಮಾಡುವ ಬಗ್ಗೆ ಏನೊಂದು ಕಾರ್ಯಕ್ರಮವನ್ನು ತೆಗೆದುಕೊಳ್ಳ ಬೇಕೋ ಅದನ್ನು ತೆಗೆದುಕೊಳ್ಳಲಾಗುತ್ತದೆ.

ಮೈಸೂರು ದಸರಾ ವಸ್ತು ಪ್ರದರ್ಶನದಿಂದ ಬಂದ ಆದಾಯ ಖರ್ಚು ಬಗ್ಗೆ

4ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ.

42. ಶ್ರೀ ಗಂಗಾಧರನ್ (ಕೃಷ್ಣರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಮೈಸೂರಿನಲ್ಲಿ ಕಳೆದ ಎರಡು ವರ್ಷಗಳಲ್ಲಿ ಸರಕಾರ ನಡೆಸಿದ ದಸರಾ ಮಹೋತ್ಸವ ಹಾಗೂ ದಸರಾ ವಸ್ತು ಪ್ರದರ್ಶನಕ್ಕೆ ವರ್ಷಾಪ್ರತಿ ಮಾಡಿದ ಖರ್ಚು ಮತ್ತು ಆದಾಯವೆಷ್ಟು ;

ಆ) ಅದಕ್ಕೆ ಮುನ್ನ ಖಾಸಗಿ ಸಂಸ್ಥೆಯು ಈ ಉತ್ಸವವನ್ನು ಎಷ್ಟು ವರ್ಷ ನಡೆಸಿತು. ಆ ಸಮಯ ದಲ್ಲಿ ಸರಕಾರದಿಂದ ಆದ ಖರ್ಚೆಷ್ಟು ಮತ್ತು ಆದಾಯವೆಷ್ಟು ;

ಇ) ಖಾಸಗೀ ಸಂಸ್ಥೆಯಿಂದ ಸರಕಾರ ವಸ್ತು ಪ್ರದರ್ಶನ ಹಾಗೂ ದಸರಾ ಉತ್ಸವದ ವ್ಯವಸ್ಥೆಯನ್ನು ವಹಿಸಿಕೊಂಡಾಗ ನಡೆದ ಒಪ್ಪಂದಗಳೇನು ;

ಈ) ಇದುವರೆಗೆ ನಡೆದ ಈ ಉತ್ಸವ ಹಾಗೂ ವಸ್ತುಪ್ರದರ್ಶನದ ಆದಾಯ ವೆಚ್ಚದ ಆಡಿಟ್ ಆಗಿ ವೆಯೆ, ಎಷ್ಟು ವರ್ಷಗಳಿಂದ ಎಲ್ಲಿಯವರೆಗೆ ಆಡಿಟ್ ಆಗಿದೆ ;

ಉ) ಈ ಬಗೆಗೆ ಇಂದಿನ ಸರಕಾರದ ನಿಲುವೇನು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯ ಮಂತ್ರಿಗಳು) :—

ಅ) ದಸರಾ ಮಹೋತ್ಸವ	1980-81	1981-82
ಖರ್ಚು	11,97,839-18	16,77,953-31
ಆದಾಯ	2,36,218-47	2,64,011-63
ದಸರಾ ವಸ್ತುಪ್ರದರ್ಶನ		
ಖರ್ಚು	28,04,095-34	28,62,125-49
ಆದಾಯ	11,39,233-49	15,54,294-65

ಆ) ಖಾಸಗಿ ಸಂಸ್ಥೆಯು 1976ನೇ ಇಸವಿಯಿಂದ 1979ರವರೆಗೆ ನಡೆಸಿತು. 1976-77ನೇ ಸಾಲಿ ನಲ್ಲಿ ಸರ್ಕಾರ 5 ಲಕ್ಷ ರೂಪಾಯಿಗಳ ಸಹಾಯಧನ ದಸರಾ ವಸ್ತುಪ್ರದರ್ಶನಕ್ಕೆ ಮಂಜೂರು ಮಾಡಿರುತ್ತೆ. ಸರ್ಕಾರಕ್ಕೆ ಯಾವ ವಿಧವಾದ ಆದಾಯವೂ ಬಂದಿರುವುದಿಲ್ಲ.

ಇ) ಸರ್ಕಾರ ಮತ್ತು ಸಂಘಕ್ಕೆ ಯಾವ ಕರಾರು ಪತ್ರ ಆಗಿರಲಿಲ್ಲ.

ಈ) 1980ನೇ ವರ್ಷದಿಂದ ದಸರಾ ಉತ್ಸವಕ್ಕೆ ಸಂಬಂಧಪಟ್ಟಂತೆ ಮಹಾಲೇಖಪಾಲಿಕರಿಂದ ಲೆಕ್ಕ ಪರಿಶೀಲನೆಯಾಗಿರುವುದಿಲ್ಲ. 1980ನೇ ಇಸವಿಯ ವಸ್ತುಪ್ರದರ್ಶನದ ಲೆಕ್ಕ ಪರಿಶೀಲನೆಯಾಗಿದೆ. 1981ನೇ ಇಸವಿಯದು ಇನ್ನೂ ಆಗಬೇಕಾಗಿದೆ. 1980ನೇ ಇಸವಿಗೆ ಮುಂಚೆ ಖಾಸಗಿ ಸಂಸ್ಥೆಯು ನಡೆಸಿದ ವಸ್ತು ಪ್ರದರ್ಶನದ ಲೆಕ್ಕಪತ್ರಗಳು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಆಡಿಟ್ ಆಗಿದೆ.

ಉ) ಸರ್ಕಾರ ಇನ್ನೂ ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ.

ಶ್ರೀ ಎಚ್. ಗಂಗಾಧರಸ್.—1980-81ರಲ್ಲಿ ದಸರಾ ಮಹೋತ್ಸವಕ್ಕಾಗಿ ಆದಂತಹ ಖರ್ಚು 11 ಲಕ್ಷದ 97 ಸಾವಿರದ 839 ರೂಪಾಯಿ 18 ಪೈಸೆ, ಆದಾಯ 2 ಲಕ್ಷದ 36 ಸಾವಿರದ 218 ರೂಪಾಯಿ 47 ಪೈಸೆ. ಅದೇ ರೀತಿ 1981-82ರಲ್ಲಿ 16 ಲಕ್ಷ 77 ಸಾವಿರದ 953 ರೂಪಾಯಿ 31 ಪೈಸೆ ಖರ್ಚಾದರೆ ಆದಾಯ 2 ಲಕ್ಷದ 64 ಸಾವಿರದ 11 ರೂಪಾಯಿ 63 ಪೈಸೆ. ಯಾವ್ಯಾವ ಬಾಬಿನಿಂದ ಬಂದಿದೆ ? ಈ ರೀತಿ ನಷ್ಟವಾಗುವುದಕ್ಕೆ ಕಾರಣವೇನು ? ಖಾಸಗಿ ಸಂಸ್ಥೆಯವರು ನಡೆಸಿದರು ಅವರಿಗೆ 5 ಲಕ್ಷ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರ ಲೆಕ್ಕ ಆಡಿಟ್ ಆಗಿದೆಯೆ ? ಅದು ಸರ್ಕಾರದ ಮುಂದೆ ಇದೆಯೆ ? 1980ನೇ ವರ್ಷದಿಂದ ದಸರಾ ಉತ್ಸವಕ್ಕೆ ಸಂಬಂಧಪಟ್ಟಂತೆ ಲೆಕ್ಕ ಆಡಿಟ್ ಆಗಿಲ್ಲವೆಂದೂ, ವಸ್ತು ಪ್ರದರ್ಶನಕ್ಕೆ ಸಂಬಂಧಪಟ್ಟಂತೆ ಆಡಿಟ್ ಆಗಿದೆಯೆಂತಲೂ ಹೇಳುತ್ತೀರಿ. ಲೆಕ್ಕಪತ್ರಗಳು ಆಡಿಟ್ ಆಗಿದ್ದರೆ ಆ ವರದಿಗಳನ್ನು ಸದನದ ಮುಂದೆ ಇಡುತ್ತೀರಾ ? ಈ ವರ್ಷ ದಸರಾ ಮಹೋತ್ಸವ ನಡೆಸುವ ಬಗ್ಗೆ ಇನ್ನೂ ಯಾವ ತೀರ್ಮಾನವನ್ನು ಕೈಗೊಂಡಿಲ್ಲವೆಂದು ಹೇಳುತ್ತೀರಿ, ತೀರ್ಮಾನವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ? ಯಾವ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಖಾಸಗೀ ಸಂಸ್ಥೆಯವರು ನಡೆಸುತ್ತಿದ್ದಾಗ ಕೆಲವು ತಪ್ಪುಗಳಾಗಿವೆ ಎನ್ನುವ ದೂರುಗಳು ಬಂದಮೇಲೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದು ಆ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಆ ವರದಿಯನ್ನು ಅಧ್ಯಯನ ಮಾಡಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಖರ್ಚು ಹೆಚ್ಚಾಗಿದೆಯೇ ಆದಾಯ ಕಡಿಮೆಯಾಗಿದೆಯೇ ಎಂಬುದರ ಬಗ್ಗೆ ಸರ್ಕಾರಕ್ಕೆ ಆಡಿಟ್ ವರದಿ ಬಂದಿದೆ. ಅದನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಸೂತ್ತವಾದ ಕ್ರಮ ತೆಗೆದುಕೊಳ್ಳಲಾಗುತ್ತದೆ. ಈ ವರ್ಷ ದಸರಾ ಮಹೋತ್ಸವ ಮಾಡುವುದಕ್ಕೆ 1 ತಿಂಗಳೊಳಗೆ ತೀರ್ಮಾನ ತೆಗೆದುಕೊಂಡು ಸರಿಯಾದ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಚ್. ಗಂಗಾಧರಸ್.—ಖಾಸಗಿಯವರೂ ಮಾಡಿದ್ದರು, ಟ್ರಸ್ಟ್‌ನವರೂ ಮಾಡಿದ್ದರು. ಅದರ ಪ್ರಾಪರ್ಟಿಯನ್ನು ಸರ್ಕಾರ ತೆಗೆದುಕೊಂಡ ಮೇಲೆ ಅದರ ಲಾಭ-ನಷ್ಟ ಏನು ಇತ್ತು ? ಅದರ ಬಗ್ಗೆ ಏನು ಕಂಡೀಷನ್ ಹಾಕಿ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನಲ್ಲಿರುವ ಮಾಹಿತಿಯ ಪ್ರಕಾರ ಸರ್ಕಾರ ತೆಗೆದುಕೊಳ್ಳುವಾಗ ಆಸ್ತಿಯ ಬೆಲೆ 24 ಲಕ್ಷದ 29 ಸಾವಿರದ 425 ರೂಪಾಯಿ 94 ಪೈಸೆ. ಬೇರೆ ಬೇರೆ ಇಲಾಖೆಗಳಿಂದ ಬಂದಂತಹ ಆಸ್ತಿಯ ಬೆಲೆ 12 ಲಕ್ಷದ 3 ಸಾವಿರದ 71 ರೂಪಾಯಿ 64 ಪೈಸೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು 69 ನಿಯಮದ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ. ಇಬ್ಬರು ಹರಿಜನರು ಸತ್ತುಹೋಗಿದ್ದಾರೆ.

ಉಪಾಧ್ಯಕ್ಷರು.—ಇನ್ನೂ ಪ್ರಶ್ನೆಗಳು ಮುಗಿದಿಲ್ಲ. ಆದು ಬರುತ್ತದೆ, ತಾವು ಕುಳಿತುಕೊಳ್ಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಸಚಿವರು).—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 10ನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

39. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ರಾಜಾಜಿನಗರದಲ್ಲಿ ಸಾರ್ವಜನಿಕ ಆಸ್ಪತ್ರೆಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಸಾರ್ವಜನಿಕ ಆಸ್ಪತ್ರೆಯನ್ನು ಕಟ್ಟಿಸಿಕೊಡಬೇಕೆಂದು ಆ ಕ್ಷೇತ್ರದ ಜನರಿಂದ ಮತ್ತು ಪ್ರತಿನಿಧಿಗಳಿಂದ ಮನವಿಗಳೇನಾದರೂ ಬಂದಿವೆಯೆ ;

ಇ) ಹಾಗಿದ್ದರೆ ಸಾರ್ವಜನಿಕ ಆಸ್ಪತ್ರೆಯನ್ನು ಮಂಜೂರು ಮಾಡಲು ಸರಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು) :—

ಅ) ಈ ಬಗ್ಗೆ ಮಾನ್ಯ ಸದಸ್ಯರು, ಮಾನ್ಯ ಮುಖ್ಯಮಂತ್ರಿಯವರಿಗೆ ದಿನಾಂಕ 4-2-83ರಂದು ಬರೆದಿರುವ ಪತ್ರ ತಲುಪಿದೆ.

ಆ) ಮಾನ್ಯ ಸದಸ್ಯರ ಈ ಸಲಹೆಯನ್ನು ಸರ್ಕಾರದವರು ಪರೀಕ್ಷಿಸುತ್ತಿದ್ದಾರೆ.

ಪ್ರಶ್ನೆ ಸಂಖ್ಯೆ... ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಇಲಾಖೆಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಈ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ದೊರಕಿಸಲು ಕ್ಯಾಪಿಟೇಷ್ಣ ಶುಲ್ಕ ಕೊಡಬೇಕಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ;